# ಪರಸ್ಪರ ದೈವದರ್ಶನ

**ಮ**ಹಾತ್ಮನೊಬ್ಬನು ಹಿಮಾಲಯದ ಗುಹೆಯೊಂದರಲ್ಲಿ ತಪಸ್ಸು ಮಾಡುತ್ತಿದ್ದನು. ಬಹಳ ಕಾಲದಿಂದ ಅವನು ಅಲ್ಲಿ ತಪೋನಿರತನಾಗಿದ್ದುದರಿಂದ ಅವನು ಮಹಾತಪಸ್ವಿ ಎಂದು ಪ್ರಸಿದ್ಧನಾಗಿದ್ದನು. ಒಂದು ದಿನ ಅವನು ಧ್ಯಾನ ಮುಗಿಸಿ ಕಣ್ಣು ತೆರೆದಾಗ ಅವನ ಮುಂದೆ ಒಬ್ಬ ವ್ಯಕ್ತಿ ಕುಳಿತಿದ್ದನು. ಅವನು ಒಬ್ಬ ಸಂನ್ಯಾಸಿ, ಪ್ರಸಿದ್ಧ ಮಠದ ಮುಖ್ಯಸ್ಥ. ತಪಸ್ವಿಯು ಅವನು ಬಂದಿರುವ ಕಾರಣವನ್ನು ವಿಚಾರಿಸಿದನು.

ಸಂನ್ಯಾಸಿಯು ತನ್ನ ದುಃಖದ ಕತೆಯನ್ನು ನಿವೇದಿಸಿಕೊಂಡನು. ಒಂದಾನೊಂದು ಕಾಲದಲ್ಲಿ ಅವನ ಮಠ ತುಂಬ ಪ್ರಸಿದ್ಧವಾಗಿತ್ತು. ಅನೇಕ ಜನ ಭಕ್ತರು ಬಂದು ಹೋಗುತ್ತಿದ್ದರು. ಅನೇಕಾನೇಕ ಧರ್ಮಪ್ರಚಾರ ಕಾರ್ಯ ನಡೆಯುತ್ತಿತ್ತು. ಸೇವಾಕಾರ್ಯಗಳಿಗಂತೂ ಲೆಕ್ಕವೇ ಇರಲಿಲ್ಲ. ಬಹು ಸಂಖ್ಯೆಯಲ್ಲಿ ಯುವಕರು ಬಂದು ಮಠ ಸೇರುತ್ತಿದ್ದರು. ಮಠ ಸಂನ್ಯಾಸಿ ಮತ್ತು ಬ್ರಹ್ಮಚಾರಿಗಳಿಂದ ತುಂಬಿಹೋಗಿತ್ತು.

ಆದರೆ ಕಾಲ ಬದಲಾಯಿತು. ಕ್ರಮೇಣ ಈ ವೈಭವ ಕ್ಷೀಣಿಸುತ್ತ ಬಂತು. ಈಗ ಜನ ಯಾರೂ ಬರುತ್ತಲೇ ಇಲ್ಲ. ಚಟುವಟಿಕೆಗಳೂ ಕಡಮೆ. ಯುವಕರು ಯಾರೂ ಮಠ ಸೇರಲು ಬರುತ್ತಲೇ ಇಲ್ಲ. ಈಗ ಕೆಲವೇ ಸಂನ್ಯಾಸಿಗಳಿದ್ದಾರೆ. ಅನೇಕರು ಬಿಟ್ಟುಹೋಗುತ್ತಿದ್ದಾರೆ. ಮಠ ಬಿಕೋ ಎನ್ನುತ್ತಿದೆ. ಯಾರಿಗೂ ಶಾಂತಿಯಿಲ್ಲ. ಇರುವವರು ಕೆಲವರು ದುಗುಡ ಮನಸ್ಸಿನಿಂದ ಹೇಗೊ ತಮ್ಮ ತಮ್ಮ ಕೆಲಸವನ್ನು ಮಾಡಿಕೊಂಡು ಹೋಗುತ್ತಿದ್ದಾರೆ.

ಮಠದ ಈ ಕರುಣಾಜನಕ ಕತೆಯನ್ನು ಹೇಳಿ ಆ ಸಂನ್ಯಾಸಿಯು ತಪಸ್ವಿಯನ್ನು ವಿಚಾರಿಸಿದ: "ಮಠದ ಈ ದುಃಸ್ಥಿತಿಗೆ ಕಾರಣವೇನು? ನಾವೇನಾದರೂ ತಪ್ಪು ಮಾಡಿರುವೆವೆ? ಅಥವಾ ಇದು ವಿಧಿ ಲೀಲೆಯೇ?"

ತಪಸ್ವಿ ಹೇಳಿದ: "ತಪ್ಪು ನಿಮ್ಮದೆ. ನಿಮ್ಮ ಅಜ್ಞಾನವೇ ಈ ದುಃಸ್ಥಿತಿಗೆ ಕಾರಣ."

"ಯಾವುದರ ಅಜ್ಞಾನ?" ಸಂನ್ಯಾಸಿ ವಿಚಾರಿಸಿದ.

ತಪಸ್ವಿ ಹೇಳಿದ: "ನಿಮ್ಮಲ್ಲಿರುವವರಲ್ಲಿ ಒಬ್ಬನು ಅವತಾರ ಪುರುಷನಾಗಿದ್ದಾನೆ. ಭಗವದ್ ಸಂದೇಶವಾಹಕನಾಗಿ ಬಂದಿದ್ದಾನೆ. ಅದರ ಅರಿವು ನಿಮಗಿಲ್ಲ. ಈ ಅಜ್ಞಾನವೇ ಈ ದುಃಸ್ಥಿತಿಗೆ ಕಾರಣ." ಇಷ್ಟು ಹೇಳಿ ಆ ತಪಸ್ವಿ ಕಣ್ಣು ಮುಚ್ಚಿ ಮತ್ತೆ ಧ್ಯಾನದಲ್ಲಿ ಮುಳುಗಿದನು.

ಸಂನ್ಯಾಸಿಯು ಕೈಮುಗಿದು ತನ್ನ ಮಠದ ಕಡೆ ಪ್ರಯಾಣ ಪ್ರಾರಂಭಿಸಿದನು. ದಾರಿಯುದ್ದಕ್ಕೂ ಅವನಿಗೆ ಒಂದೇ ಚಿಂತೆ: "ಏನಿದು, ನಮ್ಮ ಮಠದಲ್ಲೇ ದೇವದೂತನೊಬ್ಬನಿದ್ದಾನೆಯೇ? ಅದರ ಅರಿವೇ ನಮಗಿಲ್ಲವಲ್ಲ! ನಾವೆಲ್ಲ ಅರಿಯದೆ ಅವನಿಗೆ ಎಷ್ಟೊಂದು ತೊಂದರೆ ಕೊಟ್ಟಿರುವೆವೊ! ಎಂಥ ಅಪರಾಧ ಎಸಗಿರುವೆವೊ!" ಹೀಗೆಲ್ಲ ಯೋಚಿಸುತ್ತ ತನ್ನ ಮಠದಲ್ಲಿರುವ ಒಬ್ಬೊಬ್ಬರನ್ನೇ ನೆನಸಿಕೊಂಡು ದೇವದೂತನು ಇವನಿರಬಹುದೆ, ಅವನಿರಬಹುದೆ ಎಂದು ಅವರವರ ಗುಣಾವಗುಣಗಳನ್ನು ಮೆಲಕು ಹಾಕತೊಡಗಿದ. ತಪಸ್ವಿಯ ಮಾತಿನಲ್ಲಿ ಅವನಿಗೆ ಅಪಾರ ಶ್ರದ್ಧೆಯಿತ್ತು. ನಮ್ಮಲ್ಲಿ ಯಾರೊ ಒಬ್ಬರು ದೇವದೂತನಾಗಿರಲೇಬೇಕು, ಅವನಲ್ಲಿ ಏನೇ ದೋಷಗಳಿದ್ದರೂ ಅದು ತನ್ನ ದೇವತ್ವವನ್ನು ಮರೆಮಾಚುವ ಉಪಾಯವಾಗಿರಬಹುದು—ಎಂದು ಆ ಸಂನ್ಯಾಸಿ ತೀರ್ಮಾನಿಸಿದ.

ದೂರ ಪ್ರಯಾಣದ ನಂತರ ಅವನು ಮಠಕ್ಕೆ ಹಿಂತಿರುಗಿದನು. ಮಠದ ಸದಸ್ಯರೆಲ್ಲರೂ ಕುತೂಹಲದಿಂದ ಅವನ ಪ್ರವಾಸದ ಬಗ್ಗೆ ವಿಚಾರಿಸತೊಡಗಿದರು. ಸಂನ್ಯಾಸಿಯು ಸದಸ್ಯರೆಲ್ಲರನ್ನೂ ಒಂದು ಕಡೆ ಸೇರಿಸಿ ಆ ತಪಸ್ವಿಯು ಹೇಳಿದ ವಿಷಯವನ್ನು ಅವರಿಗೆ ತಿಳಿಸಿದನು.

ಸದಸ್ಯರೆಲ್ಲರೂ ಆಶ್ಚರ್ಯದಿಂದ ಒಬ್ಬರ ಮುಖವನ್ನೊಬ್ಬರು ನೋಡತೊಡಗಿದರು. ನಮ್ಮಲ್ಲಿ ದೇವದೂತನಿರಲು ಸಾಧ್ಯವೇ? ನಮ್ಮಲ್ಲಿ ಇಷ್ಟೆಲ್ಲ ದೋಷಗಳಿವೆ. ಒಬ್ಬೊಬ್ಬರ ವರ್ತನೆಯೂ ಎಷ್ಟೊಂದು ವಿಚಿತ್ರ! ಎಲ್ಲ ಸ್ವಾರ್ಥಿಗಳಂತೆ ಕಂಡುಬರುತ್ತಾರೆ. ಹೀಗಿರುವಲ್ಲಿ ನಮ್ಮಲ್ಲಿ ಒಬ್ಬರು ದೇವದೂತನಾಗಿರಲು ಹೇಗೆ ಸಾಧ್ಯ? ಇದ್ದರೂ ಇರಬಹುದು, ಯಾರಿಗೆ ಗೊತ್ತು. ದೇವದೂತನು ತಾನು ದೇವದೂತನೆಂದು ಸಾರುತ್ತ ಹೋಗುವುದಿಲ್ಲವಲ್ಲ! ಅವನು ತನ್ನ ದೇವತ್ವವನ್ನು ಮರೆಮಾಚಿಕೊಂಡಿರುತ್ತಾನೆ. ಈಗ ನಮ್ಮಲ್ಲಿ ಒಬ್ಬ ದೇವದೂತನಾಗಿದ್ದರೆ ಅವನನ್ನು ಗೌರವದಿಂದ ಕಾಣುವುದು ನಮ್ಮ ಕರ್ತವ್ಯ. ಇವನೊ ಅವನೊ ಯಾರೊ ಒಬ್ಬರು ದೇವದೂತನಾಗಿರಬೇಕು.

ಹೀಗೆ ಅವರು ಆಲೋಚಿಸುತ್ತ ತಮ್ಮಲ್ಲಿ ಪ್ರತಿಯೊಬ್ಬರನ್ನೂ ಪರಸ್ಪರ ಗೌರವದಿಂದ ಕಾಣತೊಡಗಿದರು. ಕ್ರಮೇಣ ಪರಸ್ಪರರಲ್ಲಿದ್ದ ಮನಸ್ತಾಪ ಕಡಮೆಯಾಯಿತು. ಪರಸ್ಪರ ಪ್ರೀತಿ ವಿಶ್ವಾಸ ಮೂಡತೊಡಗಿತು. ಇಡೀ ಮಠದ ವಾತಾವರಣವೇ ಬದಲಾಗತೊಡಗಿತು. ನೆಮ್ಮದಿ ಪುನಃ ಬಂದು ನೆಲಸಿತು. ಹೆಚ್ಚು ಹೆಚ್ಚು ಜನ ಯುವಕರು ಬಂದು ಮಠ ಸೇರತೊಡಗಿದರು. ಭಕ್ತರೂ ಮೊದಲಿನಂತೆ ಬರತೊಡಗಿದರು. ಮಠ ಮೊದಲಿನಂತೆ ಚಟುವಟಿಕೆಗಳಿಂದ ವೇದಘೋಷಗಳಿಂದ ತುಂಬಿ ಮೆರೆಯತೊಡಗಿತು. ಎಲ್ಲರೂ ಧ್ಯಾನಮಗ್ನರಾಗಿರುತ್ತ ಇಡೀ ಮಠ ಆಧ್ಯಾತ್ಮಿಕ ಸ್ಪಂದನದಿಂದ ಪ್ರತಿಸ್ಪಂದಿಸತೊಡಗಿತು. *

(**ಆಧಾರ**: *The Prayer of the Frog*)